# ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ

ಸಿಸಿ ನಂ. 2/21

| | | |
|---|---|---|
| ಸಾಕ್ಷಿಯ ಹೆಸರು | ರೇವಣ್ಣ | ಪಿ.ಡಬ್ಲ್ಯು-7 |
| ತಂದೆಯ ಹೆಸರು | ಜವರಯ್ಯ | ಸಿ.ಡಬ್ಲ್ಯು-18 |
| ವಯಸ್ಸು | **52** ವರ್ಷ | |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಸೆಸ್ಕಾಂ ಹಾಸನ | ದಿನಾಂಕಃ 05-01-2024. |
| ವಾಸ | ಹಾಸನ | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಎಪಿಪಿ ರವರಿಂದ

ನಾನು ದಿಃ19-07-2019 ರಿಂದ ದಿಃ 19-09-2020 ರವರೆಗೆ ಆಲೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19-08-2020 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-17 ರವರಿಂದ ಪಡೆದು , ಪರಿಶೀಲಿಸೀರುತ್ತೇನೆ, ಹಾಗೂ ಈ ಪ್ರಕರಣದಲ್ಲಿ ದಿಃ 19-08-2020 ರಂದು ಹಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಶವಪಂಚನಾಮೆಯನ್ನು ಚಾಸಾ-5 ರಿಂದ 7 ರವರ ಸಮಕ್ಷಮ ಮಧ್ಯಾಹ್ನ 12 ರಿಂದ 2 ಗಂಟೆವೆರೆಗೆ ಶವ ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಶವಪಂಚನಾಮೆಯನ್ನು ಈಗಾಗಲೇ ನಿಪಿ-12 ಎಂದು ಗುರ್ತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರ್ತಿಸಲಾಗಿದೆ. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರ್ತಿಸಿದ ಮೇರೆಗೆ ಸದರಿ ಎರಡು ಪೋಟೋಗಳನ್ನು ನಿಪಿ-15 ಎಂದು ಗುರ್ತಿಸಲಾಯಿತು. ಚಾಸಾ-7, 8 ಮತ್ತು 12 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-2, 15 ಮತ್ತು 16 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಕದಾಳು ರಸ್ತೆಯಲ್ಲಿರು ಅಪಘಾತ ದ ಸ್ಥಳದ ಪಂಚನಾಮೆಯನ್ನು ಮದ್ಯಾಹ್ನ 3 ರಿಂದ 4 ಗಂಟೆ ವರೆಗೆ ಮಾಡಿ ಸ್ಥಳದಲ್ಲಿ ಕೆಎ-13-ಎಕ್ಸ-5382 ವಾಹವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ-2 ಎಂದು ಗುರ್ತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರ್ತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ತಮ್ಮ ಸಹಿಯನ್ನು ಗುರ್ತಿಸಿದ ಮೇರೆಗೆ ಸದರಿ ದಾಖಲಾತಿಯು ಕಚ್ಚಾ ನಕಾಶೆಯಾಗಿದ್ದು ಅದನ್ನು ನಿಪಿ-16 ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ-4 ನ್ನು ನೋಡಿ ಗುರ್ತಿಸಿದ್ದು ಸದರಿ ಪೋಟೋವನ್ನು ಪಂಚನಾಮೆ ಕಾಲಕ್ಕೆ ತೆಗೆದಿರುವುದಾಗಿ ನುಡಿಯುತ್ತಾರೆ.

ದಿಃ 24-08-2020 ರಂದು ವಾಹನ ಅಪಘಾತಪಡಿಸಿದ ವಾಹನದ ಮಾಲೀಕನಿಗೆ ನೋಟೀಸ್ ಜಾರಿ ಮಾಡಿದ್ದು ವಾಹನದ ಮಾಲೀಕ ಅನಂತ್ ರವರು ಅಪಘಾತ ಮಾಡಿದ ಹಿರೋ ಹೊಂಡಾ ಬೈಕ್ ಕೆಎ-13-ಕೆ-6066 ನ್ನು ಠಾಣೆಗೆ ತಂದು ಹಾಜರುಪಡಿಸಿದ್ದು ಠಾಣಾ ಆವರಣದಲ್ಲಿ ಪಂಚರಾದ ಚಾಸಾ-10 ಮತ್ತು 11 ರವರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಬೆಳಗ್ಗೆ 9.30 ರಿಂದ 10.30 ರವರೆಗೆ ಮಾಡಿರುತ್ತೇನೆ. ಸಾಕ್ಷಿಗೆ ವಾಹನ ಮಾಲೀಕನಿಗೆ ನೀಡಿದ ನೋಟೀಸ್ ನ್ನು ನೋಡಿ ತಮ್ಮ ಸಹಿ ಗುರ್ತಿಸಿದ ಮೇರೆಗೆ ನಿಪಿ-6(ಎ) ಎಂದು ಈಗಾಗಲೇ ಗುರ್ತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು ಗುರ್ತಿಸಲಾಯಿತು. ಅವರು ನೀಡಿದಂತಹ ಉತ್ತರವನ್ನು ನಿಪಿ-7 ಎಂದು ಈಗಾಗಲೇ ಗುರ್ತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-7(ಬಿ)

ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ-3 ರಲ್ಲಿನ ವಾಹನವನ್ನು ನೋಡಿ ಗುರ್ತಿಸಿರುತ್ತಾರೆ. ವಾಹನ ಅಮಾನತ್ತು ನ್ನು ಈಗಾಗಲೇ ನಿಪಿ-5 ಎಂದು ಗುರ್ತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಡಿ) ಎಂದು ಗುರ್ತಿಸಲಾಯಿತು.

ಎರಡು ವಾಹನಗಳನ್ನು ಕೂಡ ವಾಹನ ನಿರೀಕ್ಷಕರ ಪರಿವೀಕ್ಷಣೆಗೆ ಕಳುಹಿಸಿಕೊಡಲಾಯಿತು. ದಿಃ 02-09-2020 ರಂದು ಆರೋಪಿಯನ್ನು ಹಾಜರುಪಡಿಸಿದ ಮೇರೆಗೆ ನೋಟೀಸ್ ಜಾರಿ ಮಾಡಿ ನ್ಯಾಯಾಲಯ ಕರೆದಾಗ ಹಾಜರಾಗುವಂತೆ ಸೂಚಿಸಿರುತ್ತೇನೆ. ಅದೇ ದಿನ ಅಪಘಾತ ಮಾಡಿದ ವಾಹನ ಕೆಎ-13-ಕೆ-6066 ವಾಹನವನ್ನು ಬಿಡುಗಡೆಗಾಗಿ ಆರ್ ಟಿ ಒ ಇಂದ ವರದಿ ಬಂದ ಮೇರೆಗೆ ಇಂಡೆಮ್ನಿಟಿ ಬಾಂಡ್ ಹಾಗೂ ವಾಹನ ದಾಖಲಾತಿಗಳನ್ನು ಪಡೆದು ವಾಹನ ಮಾಲೀಕ ಅನಂತ್ ರವರಿಗೆ ಫೋಟೋ ತೆಗೆದು ಬಿಟ್ಟುಕೊಟ್ಟಿರುತ್ತೇನೆ. ಸದರಿ ಇಂಡೆಮ್ನಿಟಿ ಬಾಂಡ್ ನ ಮೇಲಿನ ಸಹಿ ನೋಡಿ ಗುರ್ತಿಸಿದ ಮೇರೆಗೆ ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರ್ತಿಸಲಾಯಿತು.

ದಿಃ 04-09-2020 ರಂದು ಅಪಘಾತವಾಗಿದ್ದ ಕೆಎ-13-ಎಕ್-5382 ಆಕ್ಟಿವಾ ಹೊಂಡಾ ಫೋಟೋ ತೆಗೆದು ದಾಖಲಾತಿಗಳನ್ನು ಪಡೆದು ಚಾಸಾ-12 ರವರಿಂದ ಇಂಡೆಮ್ನಿಟಿ ಬಾಂಡ್ ಪಡೆದು ನೀಡಿರುತ್ತೇನೆ. ಸದರಿ ಇಂಡೆಮ್ನಿಟಿ ಬಾಂಡ್ ನಲ್ಲಿಯ ಸಹಿಯನ್ನು ಗುರ್ತಿಸಿದ ಮೇರೆಗೆ ಅದನ್ನು ನಿಪಿ-18 ಎಂದು ಸಾಕ್ಷಿ ಸಹಿಯನ್ನು ನಿಪಿ-18(ಎ) ಎಂದು ಗುರ್ತಿಸಲಾಯಿತು.

ದಿಃ 15-09-2020 ರಂದು ಆರ್ ಟಿ ಒ ವರದಿ ಮತ್ತು ಪಿ ಎಂ ವರದಿಯನ್ನು ಸ್ವೀಕರಿಸಿ ಪರಿಶೀಲನೆ ಮಾಡಿ ಆರೋಪಿ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ ಆರ್ ಟಿ ಒ ವರದಿ ಹಾಗೂ ಪಿ ಎಂ ವರದಿಯನ್ನು ಈಗಾಗಲೇ ನಿಪಿ-13 ಮತ್ತು 14 ಎಂದು ಗುರ್ತಿಸಲಾಗಿದ್ದು ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಎ), ನಿಪಿ-14(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯು ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

ಪಾಟೀ ಸವಾಲುಃ ಶ್ರೀ ಸಿಡಿಎನ್ ಆರೋಪಿ ಪರ ವಕೀಲರಿಂದಃ

ಮಹಜರ್ ಕ್ರಮ ಕೈಗೊಳ್ಳುವ ಮುನ್ನ ಸಾಕ್ಷಿದಾರರಿಗೆ ನೋಟೀಸ್ ನೀಡಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸ್ ನೀಡಿ ದಸ್ತಗಿರಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಕುಟುಂಬದವರಿಗೆ ಅನುಕೂಲವಾಗಲಿ ಎಂದು ಸುಳ್ಳು ದೂರು ಸೃಷ್ಟಿಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತಕುಟುಂಬದವರೊಂದಿಗೆ ಷರೀಕಾಗಿ ಸದರಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.